# ತಿದ್ದುಪಡಿ ಪ್ರಕಟಣೆ

2018-19ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕರ ತತ್ಸಮಾನ ವೃಂದದ ಶಿಕ್ಷಕರ ವರ್ಗಾವಣೆ ಸಂಬಂಧ ಮೈಸೂರು ವಿಭಾಗದ ಘಟಕದೊಳಗಿನ "ಕೋರಿಕೆ ವರ್ಗಾವಣೆಗಳ ಅಂತಿಮ ಆದ್ಯತಾ ಪಟ್ಟಿ"ಯನ್ನು ದಿನಾಂಕ 01-08-2019ರಲ್ಲಿ ಇಲಾಖಾ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಮತ್ತು ವಿಶೇಷ ಶಿಕ್ಷಕರುಗಳಿಗೆ ಸ್ಥಳ ಆಯ್ಕೆಗಾಗಿ, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇಲ್ಲಿ ಈ ಕೆಳಕಂಡಂತೆ ಕೌನ್ಸಿಲಿಂಗ್ ನಡೆಸಲಾಗುವುದು.

| ಕ್ರ ಸಂ. | ವೃಂದ | ಆದ್ಯತಾ ಸಂಖ್ಯೆ | ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ದಿನಾಂಕ ಮತ್ತು ಸಮಯ |
|---|---|---|---|
| 01 | ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 | 01 ರಿಂದ 350ರವರೆಗೆ | 13-08-2019 ಪೂರ್ವಾಹ್ನ 10-00 ಗಂಟೆಯಿಂದ |
| 02 | ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1<br>ವಿಶೇಷ ಶಿಕ್ಷಕರು | 351 ರಿಂದ 526ರವರೆಗೆ<br>01 ರಿಂದ 234ರವರೆಗೆ | 14-08-2019 ಪೂರ್ವಾಹ್ನ 10-00 ಗಂಟೆಯಿಂದ |

ಆದ್ದರಿಂದ ಮೇಲ್ಕಂಡಂತೆ ಸಂಬಂಧಿಸಿದ ಶಿಕ್ಷಕರು ಅವರಿಗೆ ಅನ್ವಯಿಸುವ ದಿನಾಂಕಗಳಂದು ಸ್ಥಳ ಆಯ್ಕೆಗಾಗಿ ಈ ಕೆಳಕಂಡ ದಾಖಲೆಗಳೊಡನೆ ಕೌನ್ಸಿಲಿಂಗ್‌ಗೆ ಸಕಾಲದಲ್ಲಿ ಹಾಜರಿರಲು ಸೂಚಿಸಿದೆ.

1. ಸಕ್ಷಮ ಪ್ರಾಧಿಕಾರದಿಂದ ಪಡೆದ ಸೇವಾ ದೃಢೀಕರಣ ಪತ್ರ (ಫೋಟೋ ಸಹಿತ) .
2. ಆದ್ಯತೆ ಕೋರಿರುವ ಶಿಕ್ಷಕರು, ಕೋರಿರುವ ಆದ್ಯತೆಗೆ ನಿರ್ಧಿಷ್ಟಪಡಿಸಿದ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಕಡ್ಡಾಯವಾಗಿ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.
3. ಅನ್ವಯವಾಗುವ ಇತರೆ ದಾಖಲೆಗಳು.

(ಹೆಚ್.ಎನ್. ಗೀತಾಂಬ)
ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ
ಜಂಟಿನಿರ್ದೇಶಕರು ಮತ್ತು ವರ್ಗಾವಣಾ ಪ್ರಾಧಿಕಾರಿ,
ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು.

JDPi-2/CN/D/G4 Transfer/Transfer 2019/Paper notification